ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 6 ಸಂ. 12 ಡಿಸೆಂಬರ್ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಮೂಲಭೂತ ಸತ್ಯಗಳನ್ನು ನಾವು ಅರಿತಿರಲೇಬೇಕು; ಕನಿಷ್ಠಪಕ್ಷ ನಮ್ಮ ಬಗ್ಗೆ ಇರುವ ಸತ್ಯಗಳನ್ನು ತಿಳಿದಿರಬೇಕು: ನಿಜವಾಗಿಯೂ ನಾವು ಯಾರು? ನಾವೇಕೆ ಈ ಭೂಮಿಯ ಮೇಲೆ ಇದ್ದೇವೆ? ನಮ್ಮ ಸಾವಿನ ನಂತರ ನಮಗೆ ಏನಾಗುತ್ತದೆ? ನಾವು ಸತ್ತ ಮೇಲೂ ಅಸ್ತಿತ್ವದಲ್ಲಿರುತ್ತೇವೆಯೇ? ಹಾಗಿದ್ದರೆ ನಾವು ಇಲ್ಲಿಂದ ಎಲ್ಲಿಗೆ ಹೋಗುತ್ತೇವೆ? ನಾವು ವಾಪಸು ಇಲ್ಲಿಗೆ ಬರುತ್ತೇವೆಯೇ? ಏಕೆ ಬರುತ್ತೇವೆ? ನಾವು ಪುನಃ ನಮ್ಮ ಒಡನಾಡಿಗಳನ್ನು ಸಂಧಿಸುತ್ತೇವೆಯೇ? ನಾವು ಈ ದೇಹವನ್ನು ತ್ಯಜಿಸಿದ ನಂತರ ನಮ್ಮ ಆಸಕ್ತಿಗಳು ಮತ್ತು ಪ್ರತಿಭೆಗಳು ನಮ್ಮ ಜೊತೆಗಿರುತ್ತವೆಯೇ? ನಮ್ಮ ಕನಸುಗಳು ಮತ್ತು ಕವನಗಳು ನಮ್ಮೊಂದಿಗಿರುತ್ತವೆಯೇ? ನಮ್ಮ ಬೇಕು-ಬೇಡಗಳು ಏನಾಗುತ್ತವೆ? ನಾವು ವಿಚಾರಣೆಗೆ ಗುರಿಯಾಗುತ್ತೇವೆಯೇ? ಯಾರು ವಿಚಾರಣೆ ಮಾಡುತ್ತಾರೆ? ದಂಡನೆ-ಪುರಸ್ಕಾರಗಳಿವೆಯೇ?..........ಓಹ್! ಎಷ್ಟೊಂದು ಪ್ರಶ್ನೆಗಳು! ಇವು ಕೆಲವು ಮಾತ್ರ, ಮತ್ತು ಅದರಲ್ಲೂ ನಮ್ಮ ಬಗ್ಗೆ ಮಾತ್ರ. ಇನ್ನೂ ಅನೇಕ ಇತರ ಸತ್ಯಗಳಿವೆ: ಸೃಷ್ಟಿಯ ಬಗ್ಗೆ, ಸೃಷ್ಟಿಕರ್ತನ ಬಗ್ಗೆ...... ಇನ್ನೂ ಅನೇಕ!

ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯುವುದು ಸಾಧ್ಯವಿದೆಯೇ? ಹೌದು, ಖಂಡಿತ ಸಾಧ್ಯವಿದೆ. ನಮ್ಮ ಪ್ರಾಚೀನ ಜ್ಞಾನದಲ್ಲಿ, ಕೆಲವು ಪ್ರಶ್ನೆಗಳಿಗೆ ಉತ್ತರಗಳಿವೆ. ಈಗ, ಅನೇಕ ಪ್ರಶ್ನೆಗಳಿಗೆ ಉತ್ತರಗಳಿವೆ. ಇವು ಋಷಿಗಳಿಂದ ಬಂದ ಉತ್ತರಗಳು. ಎಲ್ಲಾ ಉತ್ತರಗಳು 'ವಿಶ್ವ'ದ ಒಡಲಲ್ಲಿ ಸಿಗುತ್ತವೆ. ನಾವು ಪ್ರಶ್ನೆಗಳನ್ನು ಅಂತರಾಳದ ಮಟ್ಟದಲ್ಲಿ ಕೇಳಬೇಕು. ಆ ಮಟ್ಟದಲ್ಲಿ ನಮಗೆ ಖಂಡಿತವಾಗಿ ಉತ್ತರಗಳು ಸಿಗುತ್ತವೆ. ಪ್ರಾರಂಭದಲ್ಲಿ ನಮ್ಮ ಮೇಲಿನ ಪ್ರಜ್ಞಾವಸ್ಥೆಗೆ ಈ ಉತ್ತರಗಳನ್ನು ತರುವುದು ಕಷ್ಟವಾಗಬಹುದು. ಆದರೆ ಧ್ಯಾನ ಮತ್ತು ಚಿಂತನೆಯಿಂದ ಇದು ಸಾಧ್ಯ.

ನಾವು ಉತ್ತರಗಳನ್ನು ತಿಳಿದಿರಲೇಬೇಕು ಎಂಬುದು ಆಧ್ಯಾತ್ಮಿಕ ಅನಿವಾರ್ಯ, ಏಕೆಂದರೆ ಈ ಉತ್ತರಗಳಿಂದ ನಮ್ಮ ವಿವೇಕ ಸಂಪದ್ಭರಿತವಾಗುತ್ತದೆ. ಈ ವಿವೇಕದಿಂದ ನಾವು ಸರಿಯಾದುದನ್ನು ಆಯ್ಕೆಮಾಡುತ್ತೇವೆ ಮತ್ತು ಈ ಬಾಳಿನಲ್ಲಿ ಅತ್ಯುತ್ತಮವಾದದ್ದನ್ನು ಬದುಕುತ್ತೇವೆ.

ಧ್ಯಾನ, ಚರ್ಚೆ ಮತ್ತು ಉಪನ್ಯಾಸಗಳನ್ನೆಲ್ಲ ಮೀರಿ, ನಮ್ಮ ಒಳಹೊಕ್ಕು ನೋಡಿಕೊಳ್ಳುವುದು ನಿಸ್ಸಂದೇಹವಾಗಿ ನಮಗೆ ಸಹಾಯವಾಗುತ್ತದೆ. ನಮ್ಮ ನಿಜಜೀವನದಲ್ಲಿ ಎಷ್ಟು ಪ್ರೀತಿಯನ್ನು ವ್ಯಕ್ತಪಡಿಸುತ್ತೇವೆ; ಇತರರ ಕುಂದುಕೊರತೆಗಳು ಮತ್ತು ನ್ಯೂನತೆಗಳನ್ನು ನಾವು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತೇವೆ ಎಂಬುದನ್ನು ನಾವು ಕಂಡುಕೊಳ್ಳಬೇಕು. ನಮ್ಮ ನಿಜರೂಪ ಗೊತ್ತಾದಾಗ ನಮಗೆ ಆಘಾತವಾಗುತ್ತದೆ! ಅದು ಬಹಳ ಕಡಿಮೆ ಪ್ರಮಾಣದ್ದು. ಆಧ್ಯಾತ್ಮಿಕ ಪಯಣದಲ್ಲಿ ಪ್ರಗತಿ ಸಾಧಿಸಲು ಈ "ಬಹಳ ಕಡಿಮೆ" ಆಘಾತ ಸಾಲದು. ಅದರ ನಂತರ ನಾವು ಬದಲಾಗಬೇಕು, ವಿಸ್ತರಿಸಬೇಕು ಮತ್ತು ಮುಂದೆ ಸಾಗಬೇಕು.

ಬದಲಾಗುವುದು, ವಿಸ್ತರಿಸುವುದು ಮತ್ತು ಮುಂದೆ ಸಾಗುವುದು, ಆಧ್ಯಾತ್ಮಿಕತೆ.

ಇಪ್ಪತ್ತು ವರ್ಷಗಳ ಹಿಂದೆ, ಬರ್ಲಿನ್ ಗೋಡೆ ಉರುಳಿತು. ಎರಡು ಜರ್ಮನಿಗಳೂ ಪರಸ್ಪರರಿಗೆ ತೆರೆಯಲ್ಪಟ್ಟವು. ಅದೊಂದು ಮಹತ್ವಪೂರ್ಣ ಘಟ್ಟ; ಮಹತ್ವದ ಕ್ಷಣ. ನಾನು ಸುತ್ತಲೂ ನೋಡಿದಾಗ, ಅನೇಕ ಗೋಡೆಗಳನ್ನು ಕಾಣುತ್ತೇನೆ. ಒಳಗೆ ಮತ್ತು ಹೊರಗೆ ಕೂಡ. ಗೋಡೆಗಳನ್ನು ಕಟ್ಟುವುದರಲ್ಲಿ ನಾವು ನಿಸ್ಸೀಮರು. ನಮ್ಮ ದೇಶಗಳಲ್ಲಿ, ಸಮಾಜಗಳಲ್ಲಿ ಗುಂಪುಗಳಲ್ಲಿ ಮತ್ತು, ದುಃಖಕರ ಸಂಗತಿಯೆಂದರೆ, ನಮ್ಮೊಳಗೇ ಗೋಡೆಗಳನ್ನು ಕಟ್ಟುತ್ತೇವೆ.

ಬೆಳಕು, ಬೆಳಕಿನ ಮಾಸ್ಟರ್‌ಗಳು ಮತ್ತು ಬೆಳಕಿನ ಕಾರ್ಯಕರ್ತರು ಈ ಗೋಡೆಗಳನ್ನು ಕೆಡವುತ್ತಿದ್ದಾರೆ. ಆದರೆ ಬೇಗನೆ ಹೊಸ ಗೋಡೆಗಳು ಬರುತ್ತವೆ. ಈ ಗೋಡೆಗಳನ್ನೆಲ್ಲ ಕೆಡವುತ್ತಾ ಹೋಗುವುದು ಬೆಳಕಿನ-ಕಾರ್ಯ.

ನಾನು ನನ್ನ ಸುತ್ತಲೂ ಹಲವಾರು ಗೋಡೆಗಳನ್ನು ಕೆಡವಬೇಕು!

2009ನೇ ವರ್ಷ ಮುಗಿಯುತ್ತಿದೆ. ಈ ವರ್ಷದಲ್ಲಿ ನಾವು ('ರಾ') ಪ್ರಕಾಶಬ್ರಹ್ಮನಿಂದ, ಚೈತನ್ಯಗಳನ್ನು ತಂದು 'ರಾ' ಧ್ಯಾನ ಮಂದಿರದ ಕೆಳಗೆ ಸ್ಥಾಪಿಸಿದೆವು. ಮತ್ತು, 2012 ಮತ್ತು ಅದರ ನಂತರದ ಬಗ್ಗೆ ಮಹತ್ವದ ಜ್ಞಾನವನ್ನು ಸಂಗ್ರಹಿಸಿದೆವು.

2009 ಒಂದು ಮಹತ್ವಪೂರ್ಣವಾದ ವರ್ಷ. ❑

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
© (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



'ರಾ' ಧ್ಯಾನಮಂದಿರ ಡಿಸೆಂಬರ್ 5ರಿಂದ ಧ್ಯಾನಿಗಳಿಗೆ ತೆರೆಯಲ್ಪಡುತ್ತದೆ.

### ಸುದ್ದಿ-ಸೂಚನೆ

- ಶಂಬಲ ಗ್ರೂಪ್ ಸೇರಲು ಬಯಸುವ ಸಾಧಕರು ತಮ್ಮ ಹೆಸರನ್ನು 31-12-2009ರೊಳಗೆ ರಿಜಿಸ್ಟರ್ ಮಾಡಬೇಕು. ದೂರ ಕಲಿಕೆಯ ಸಾಧಕರು ಕೂಡ ಸೇರಬಹುದು.
- 27-12-2009ರಂದು ನಡೆಯುವ ಅಖಂಡ ಧ್ಯಾನದಲ್ಲಿ ಭಾಗವಹಿಸಲು ಬಯಸುವವರು, ಭಾಗವಹಿಸುವ ಸಮಯದೊಂದಿಗೆ 25-12-2009ರ ಒಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.
- 31-10-2009ರಂದು ಆನೇಕಲ್‌ನಲ್ಲಿ ಲಯನ್ಸ್ ಕ್ಲಬ್‌ನವರು ಆಯೋಜಿಸಿದ ಗಿಡ ನೆಡುವ ಕಾರ್ಯಕ್ರಮವನ್ನು ಗುರೂಜಿಯವರು ಉದ್ಘಾಟಿಸಿದರು.
- ಶಂಬಲ ಗ್ರೂಪ್ 8-11-2009ರಂದು ಮತ್ತು ರಾ-ಗ್ರೂಪ್ 15-11-2009ರಂದು ಗುರೂಜಿಯವರಿಂದ ಹೆಚ್ಚಿನ ಮಾರ್ಗದರ್ಶನ ಪಡೆಯಲು ಸಂಧಿಸಿದವು.
- "ತಪೋವಾಣಿ"ಯನ್ನು ಕಾಂಪ್ಲಿಮೆಂಟರಿಯಾಗಿ ಪಡೆಯುತ್ತಿರುವವರು ಮುಂದೆಯೂ ಪಡೆಯುವ ಆಸಕ್ತಿಯಿದ್ದಲ್ಲಿ ಅದನ್ನು ವ್ಯಕ್ತಪಡಿಸಬೇಕು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಡಿಸೆಂಬರ್ 20 | ರಾ-ಗ್ರೂಪ್ ಮಧ್ಯಾಹ್ನ 2ಕ್ಕೆ ಸಂಧಿಸುತ್ತದೆ. ಲೈಟ್ ಚಾನಲ್ಸ್ ಗ್ರೂಪ್ ಮಧ್ಯಾಹ್ನ 2.30ಕ್ಕೆ ಸಂಧಿಸುತ್ತದೆ |
| ಡಿಸೆಂಬರ್ 25 | ಕ್ರಿಸ್‌ಮಸ್ ವಿಶೇಷ ಧ್ಯಾನ ಮಧ್ಯಾಹ್ನ 12ರಿಂದ 1ರವರೆಗೆ |
| ಡಿಸೆಂಬರ್ 27 | ಅಖಂಡ ಧ್ಯಾನ ಬೆಳಿಗ್ಗೆ 6ರಿಂದ ಸಾಯಂಕಾಲ 6 ರವರೆಗೆ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 04-10-09 | ಚಿರಾಗ್, ಗ್ರೀಷ್ಮಾ ಪರ್ಮಾರ್ ಮತ್ತು ಆನಂದಮಯಿ ಗೋಡ್ಸೆ |
| 11-10-09 | ಚಿರಾಗ್, ಗ್ರೀಷ್ಮಾ ಪರ್ಮಾರ್, ಹೇಮಲತಾ ಪ್ರಮೋದ್, ಚಂದ್ರಕಲಾ, ಶಿವಕಾಮೇಶ್ವರನ್ ಮತ್ತು ಭುವನೇಶ್ವರಿ |
| 18-10-09 | ಚಿರಾಗ್, ಗ್ರೀಷ್ಮಾ ಪರ್ಮಾರ್, ಸರ್ವಮಂಗಲ ನಾಗಭೂಷಣ್, ಸಿಂಧು, ಓಂ ಕಾನಡೆ, ವರಲಕ್ಷ್ಮಿ ಮತ್ತು ಛಾಯಾ ಕೋಲ್ಟೆ |
| 25-10-09 | ಚಿರಾಗ್, ಗ್ರೀಷ್ಮಾ ಪರ್ಮಾರ್, ಶಶಿಕಲಾ, ಸ್ವಸ್ತಿಕಾ ಕಾನಡೆ ಮತ್ತು ರಾಮರತ್ನ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಮಂಗಳ | ಶಿವದೀಪ |
| 02 | ಬುಧ | ಪೂರ್ಣಿಮಾ, ವಿಷ್ಣುದೀಪ |
| 09 | ಬುಧ | ಕೃಷ್ಣಾಷ್ಟಮಿ |
| 14 | ಸೋಮ | ಮಾಸ ಶಿವರಾತ್ರಿ |
| 16 | ಬುಧ | ಅಮಾವಾಸ್ಯೆ |
| 24 | ಗುರು | ಕ್ರಿಸ್‌ಮಸ್ ಹಿಂದಿನ ದಿನ |
| 25 | ಶುಕ್ರ | ಕ್ರಿಸ್‌ಮಸ್ |
| 27 | ಭಾನು | ಅಖಂಡ ಧ್ಯಾನ |
| 31 | ಗುರು | ಪೂರ್ಣಿಮಾ, ಚಂದ್ರ ಗ್ರಹಣ ರಾತ್ರಿ 10.46ರಿಂದ 1-1-10ರ ಬೆಳಗಿನ ಜಾವ 3-01ರವರೆಗೆ |

**ತಪೋನಗರದಲ್ಲಿ 27-12-09 ರಂದು ಬೆಳಿಗ್ಗೆ 6 ರಿಂದ ಸಾಯಂಕಾಲ 6 ರವರೆಗೆ ಅಖಂಡ ಧ್ಯಾನವಿದೆ. ಎಲ್ಲರಿಗೂ ಸುಸ್ವಾಗತ.**

ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು
ಶ್ರೀ ಅವಿನಾಶ್ ರಾವ್.

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.




ಬೆಂಗಳೂರು ಪುಸ್ತಕೋತ್ಸವದಲ್ಲಿ ನಮ್ಮ ಸ್ಟಾಲ್

## ಪುಸ್ತಕೋತ್ಸವ

ಪುಸ್ತಕೋತ್ಸವದಲ್ಲಿದ್ದ ಎಲ್ಲ ಸ್ಟಾಲ್‌ಗಳ ನಡುವೆ ನಮ್ಮ ಸ್ಟಾಲ್‌ನ ಶುಭ್ರತೆ ಮತ್ತು ನಮ್ಮ ಪುಸ್ತಕಗಳು ಪ್ರದರ್ಶಿಸಲ್ಪಟ್ಟಿದ್ದ ರೀತಿ ಎಲ್ಲರ ಮನಸೆಳೆದವು. ಕಾರ್ತಿಕ್ ಮತ್ತು ಶ್ರೀದೇವಿಯವರ ನೇತೃತ್ವದಲ್ಲಿ ನಿಷ್ಠಾವಂತ ವಾಲಂಟಿಯರ್‌ಗಳ ಒಂದು ತಂಡ ಒಟ್ಟುಗೂಡಿ ಕೆಲಸವನ್ನು ಹಂಚಿಕೊಂಡರು. ಇಡೀ ಸ್ಟಾಲ್ ಅವರ ಪರಸ್ಪರ ಅನ್ಯೋನ್ಯತೆ, ಕಾಳಜಿ ಮತ್ತು ಪ್ರೀತಿಗಳಿಂದ ತುಂಬಿ ತುಳುಕುತ್ತಿತ್ತು. ಇವುಗಳಿಗೆ ಸ್ಪಂದಿಸಲೆಂಬಂತೆ ಸಾವಿರಾರು ಜನ ನಮ್ಮ ಸ್ಟಾಲ್‌ಗೆ ಭೇಟಿ ನೀಡಿದರು. ಆಕರ್ಷಕ ಶೀರ್ಷಿಕೆಗಳನ್ನು ಹೊಂದಿದ್ದ, "2012 ಅಂತ್ಯ ಅಥವ ಆರಂಭ" ಮತ್ತು "2012 ನಂತರ" ಪುಸ್ತಕಗಳು ಎಲ್ಲರ ಗಮನ ಸೆಳೆದವು. ಪ್ರತಿಯೊಬ್ಬರಿಗೂ 2012ರ ಬಗ್ಗೆ ತಿಳಿದುಕೊಳ್ಳುವ ಕುತೂಹಲವಿತ್ತು. ಅನೇಕರು ನಮ್ಮ ವಿವರಣೆಗಳನ್ನು ನಂಬಿದರು ಮತ್ತು ಅನೇಕರು ಸಂದೇಹಿಸಿದರು. ಅನೇಕರಿಗೆ 2012ರ ಪ್ರಾಮುಖ್ಯತೆಯ ಅರಿವಿತ್ತು, ಅದರ ಬಗ್ಗೆ ಗೊತ್ತಿಲ್ಲದವರೂ ಅನೇಕರಿದ್ದರು. ಕೆಲವರು ಕಳಕಳಿಯಿಂದ ಕೇಳಿದರು, "ಈಗ ಎಲ್ಲಕಡೆ 2012ರ ಬಗ್ಗೆ ಕಾಳ್ಗಿಚ್ಚಿನಂತೆ ಹಬ್ಬುತ್ತಿರುವ ಗಾಳಿಮಾತು ನಿಜವೇ? ದಯವಿಟ್ಟು ನಮಗೆ ಹೇಳಿ. ಎರಡು ವರ್ಷಗಳಲ್ಲಿ ನಾವು ಸಾಯುವುದಕ್ಕೆ ನಮಗೆ ಇಚ್ಛೆ ಇಲ್ಲ." 2012ರ ಸರಣಿ ಪುಸ್ತಕಗಳು ಅತ್ಯಂತ ಜನಪ್ರಿಯತೆ ಗಳಿಸಿದವು. ಹತ್ತು ದಿನಗಳ ಕಾಲ, ನಮ್ಮ "ಬೆಳಕಿನ ಸಂಚಲನ"ವನ್ನು ಬಿಂಬಿಸುವ ದೃಶ್ಯದಿಂದ ಹೊಮ್ಮುತ್ತಿದ್ದ ಬೆಳಕಿನ ಅಲೆಗಳು ಇಡೀ ಪುಸ್ತಕೋತ್ಸವವನ್ನು ಆವರಿಸಿದ್ದವು. ▪

## ತಪೋನಗರ ಡೈರಿ

ಸಂ: ಸೀಮಾ ಅಲ್‌ವೇಲ್; ಅನು: ವರ್ಷ ಗುರ್ಜರ್

ಅಕ್ಟೋಬರ್ ತಿಂಗಳು ತಪೋನಗರದ ತುಂಬಾ ಬೆಳಕಿನ ಹಬ್ಬದ ಆತ್ಮೀಯತೆಯ ಸಂತಸ ತುಂಬಿತ್ತು. ದೀಪಾವಳಿ ಹಬ್ಬದ ಈ ತಿಂಗಳು ಗುರೂಜಿಯವರು ಪ್ರತಿಯೊಂದು ಹೃದಯವನ್ನು ದಿವ್ಯ ಬೆಳಕಿನಿಂದ ಬೆಳಗಿದರು. ಪ್ರತಿ ತಿಂಗಳು ನಡೆಯುವ ರಿಟ್ರೀಟ್‌ಗೆ ಬರುವ ಸಾಧಕರ ಸಂಖ್ಯೆ ಸತತವಾಗಿ ಹೆಚ್ಚುತ್ತಿದೆ. ಪ್ರತಿ ಬಾರಿಯಂತೆ ಈ ಬಾರಿಯೂ ಸಾಧಕರಿಗೆ ಹೆಚ್ಚಿನ ಜ್ಞಾನ ಮತ್ತು ಪ್ರೀತಿಯನ್ನು ಗುರೂಜಿಯವರು ನೀಡಿದರು. ಸುಮಾರು 50 ಜನ ಆಧ್ಯಾತ್ಮಿಕ ಸಾಧಕರು ಚಳ್ಳಕೆರೆ ತಾಲ್ಲೂಕಿನಿಂದ, ಭಾನುವಾರದ ಉಪನ್ಯಾಸ ಮತ್ತು ಧ್ಯಾನಕ್ಕೆ ಹಾಜರಾಗಲೆಂದು ಬಂದಿದ್ದರು. ನಂತರ ಗುರೂಜಿಯವರು ಅವರಿಗಾಗಿ ವಿಶೇಷ ಸಂದರ್ಶನ ನೀಡಿದರು.

ತಪೋನಗರ ನಿವಾಸಿಗಳು ಒಟ್ಟಾಗಿ ಸೇರಿ ಪಟಾಕಿ ಸಿಡಿಸುವುದರ ಮೂಲಕ ದೀಪಾವಳಿಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಎಲ್ಲರೂ ಚಿಕ್ಕ ಮಕ್ಕಳಂತೆ ಹರ್ಷಪಡುತ್ತಿರುವುದನ್ನು ಗುರೂಜಿಯವರು ಮೌನದಿಂದ ಗಮನಿಸುತ್ತಿದ್ದರು.

ತಪೋನಗರ ನಿವಾಸಿಗಳ ಮಾಸಿಕ ಕೂಟದಲ್ಲಿ ಸದಾ ಹಸನ್ಮುಖಿ, ನಮ್ಮೆಲ್ಲರ ಅಚ್ಚುಮೆಚ್ಚಿನ ಶ್ಯಾಮಲಾ ಆಂಟಿಯ ಜನ್ಮದಿನವನ್ನು ಆಚರಿಸಲಾಯಿತು. ಅಂದು ಗುರೂಜಿಯವರು ತಪೋನಗರ ನಿವಾಸಿಗಳಿಗೆ ಒಂದು ಸಂದೇಶ ನೀಡಿದರು, "ಪ್ರಚಲಿತ ವಿದ್ಯಮಾನಗಳ ಬಗ್ಗೆ ನಮಗೆ ಅರಿವಿರಬೇಕು. ಪ್ರಪಂಚದ ಬಗ್ಗೆ ನಮಗಿರುವ ಜವಾಬ್ದಾರಿ ಮತ್ತು ಕಾಳಜಿ ನಾವು ತಪೋನಗರ ನಿವಾಸಿಗಳೋ ಅಥವಾ ಪಕ್ಕದ ಚಿಕ್ಕಗುಬ್ಬಿ ಗ್ರಾಮದವರೋ ಎಂಬುದನ್ನು ತೀರ್ಮಾನಿಸುತ್ತದೆ." ▪

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ಶಿವಪ್ರಕಾಶ್ ಎಲ್)

**04–10–2009**

ನಾವು ದೀರ್ಘಕಾಲದವರೆಗೆ ಕ್ರಮಬದ್ಧವಾಗಿ ಧ್ಯಾನವನ್ನು ಮಾಡಲು ಪ್ರಾರಂಭಿಸಿದಾಗ ನಿಶ್ಚಲತೆಯನ್ನು ಅನುಭವಿಸಲು ಪ್ರಾರಂಭ ವಾಗುತ್ತದೆ. ಆಗ ಒಳ್ಳೆಯದೆಲ್ಲವೂ ಸಂಭವಿಸುತ್ತದೆ. ಪರಿವರ್ತನೆ ಮತ್ತು ಗುಣಾತ್ಮಕತೆ ಉಂಟಾಗುತ್ತದೆ. ಅನೇಕ ವಾಸ್ತವೀಯತೆಗಳಿಗೆ ನಾವು ಎಚ್ಚರಗೊಳ್ಳುತ್ತೇವೆ. ಅಂದರೆ ನಾವು ದೇವರ ಭಾಗ, ಈ ಸೃಷ್ಟಿಯ ಭಾಗ ಮತ್ತು ನಾವು ಬಲಿಷ್ಠರು, ನಾವಿಲ್ಲಿ ಕೇವಲ ಜೀವನವನ್ನು ಅನುಭವಿಸಲು ಬಂದಿದ್ದೇವೆ.

ನಮ್ಮ ಮನೆ ಬೇರೆ, ಅಲ್ಲಿಗೆ ನಾವು ಹಿಂದಿರುಗಿ ಹೋಗಬೇಕು, ಆದರೆ ನಾವೇ ಸೃಷ್ಟಿಸಿಕೊಂಡ ಬಲೆಗೆ ಸಿಕ್ಕಿಕೊಂಡಿದ್ದೇವೆ.

ನಾವು ಧ್ಯಾನ ಮಾಡಿದಾಗ ಜ್ಞಾನೋದಯ ಪಡೆಯುತ್ತೇವೆ. ಮೊದಲು ಅದು ಬೌದ್ಧಿಕ ಮಟ್ಟದಲ್ಲಿಉಂಟಾಗಿ ನಾವು ಬೆಳಕು ಎಂಬುದನ್ನು ಮನಗಾಣುತ್ತೇವೆ. ನಂತರ ಆತ್ಮದ ಮಟ್ಟದಲ್ಲಿ ಆಗುತ್ತದೆ. ಅನಂತರ ನಾವು ಅತ್ಯಂತ ಮುಖ್ಯವೆನಿಸಿದ ಮತ್ತು ಪರಮೋನ್ನತ ಬೆಳಕನ್ನು ಅನುಭವಿಸುತ್ತೇವೆ.

ಈ ಧ್ಯಾನ ಮತ್ತು ಋಷಿ–ಮಾರ್ಗದಲ್ಲಿ ಪ್ರಾಮಾಣಿಕವಾಗಿ ಧ್ಯಾನ ಮಾಡಿದರೆ, ಅಷ್ಟೇ ಸಾಕು. ಇಲ್ಲಿ ನೀಡುವ ತಂತ್ರಗಳು ಅಷ್ಟೊಂದು ಶಕ್ತಿಯುತವಾಗಿವೆ. ದೀಕ್ಷೆ ಪಡೆಯುವ ಸಂದರ್ಭದಲ್ಲಿ ಋಷಿಗಳು ಅನೇಕ ಪ್ರಕ್ರಿಯೆಗಳನ್ನು ಚಾಲನೆ ಮಾಡುವ ಬಗ್ಗೆ ನಮಗೆ ತಿಳಿದಿಲ್ಲ. ನಾವು ಧ್ಯಾನಿಸಿದಾಗ ಹೀಲಿಂಗ್ ಮತ್ತು ಪ್ರಾಣಾಯಾಮಗಳು ತಮ್ಮಷ್ಟಕ್ಕೆ ತಾವೇ ಉಂಟಾಗುತ್ತವೆ. ಅಲ್ಲದೆ ಅತ್ಯಂತ ಶ್ರೇಷ್ಠ ಕುಂಡಲಿನಿ ತನ್ನಷ್ಟಕ್ಕೆ ತಾನೇ ಮೇಲೇರುತ್ತದೆ. ಧ್ಯಾನ ನಮ್ಮನ್ನು ಪರಿಶುದ್ಧ ಮಾಡುತ್ತದೆ ಮತ್ತು ಪುನರುಜ್ಜೀವನಗೊಳಿಸುತ್ತದೆ. ಅನೇಕ ಮಹೋನ್ನತ ಬದಲಾವಣೆಗಳು ನಮ್ಮಲ್ಲಿ ಉಂಟಾಗುತ್ತವೆ. ಅವನ್ನು ಬೇರೆಯವರು ಗುರುತಿಸುವರು. ಈ ಬದಲಾವಣೆಗಳು ನಮಗೆ ಮನವರಿಕೆಯಾಗುತ್ತವೆ ಮತ್ತು ನಮಗೆ ಅವುಗಳ ಬಗ್ಗೆ ಅರಿವಿರುತ್ತದೆ. ನಾವು ಈ ಕಾರ್ಯವಿಧಾನಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು.

ನೀವು ಒಂದು ಗಂಟೆಗಿಂತಲೂ ಹೆಚ್ಚು ಕಾಲ ಧ್ಯಾನ ಮಾಡಲು ಆಗದಿದ್ದರೆ ಚಾನಲಿಂಗ್–ಅನ್ನು ತಪ್ಪದೇ ಅಭ್ಯಾಸ ಮಾಡಬೇಕು. ಅನೇಕ ವರ್ಷಗಳ ಅಭ್ಯಾಸದ ನಂತರವೂ, 'ನನಗೆ ಏಕಾಗ್ರತೆ ಸಾಧ್ಯವಿಲ್ಲ' ಎಂಬಂತಹ ದೂರುಗಳು ಬರುತ್ತವೆ. ಧ್ಯಾನವೆಂದರೆ 'ಏಕಾಗ್ರತೆ ಮಾಡುವುದಲ್ಲ' ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಧ್ಯಾನದಲ್ಲಿ ನಾವು ಯಾವಾಗಲೂ ದೇವರೊಂದಿಗೆ ಸಂಪರ್ಕ ಪಡೆದು ಜೀವಂತಿಕೆ ಮತ್ತು ಆನಂದದಿಂದ ಇರಲು ಸಾಧ್ಯವಾಗಿರುತ್ತದೆ.

ಋಷಿಗಳು ಬಹಳ ಮುಖ್ಯವಾದ ವಿಷಯ ತಿಳಿಯಪಡಿಸಿದ್ದಾರೆ: ಕಲಿಯುಗದ ಕಾಲದಲ್ಲಿ ಎಲ್ಲರಿಗೂ ಕಲಿಪುರುಷ ಕಪ್ಪು ಚೈತನ್ಯಗಳನ್ನು ತುಂಬುತ್ತಾನೆ. ಈಗ ನಾವು ಫೋಟಾನ್ ಬೆಲ್ಟ್–ಅನ್ನು ಪ್ರವೇಶ ಮಾಡುತ್ತಿರುವುದರಿಂದ 432 ವರ್ಷಗಳ ಪರಿವರ್ತನೆಯ ಕಾಲ ಕಡಿಮೆಯಾಗಿದೆ. ಆದ್ದರಿಂದ ಕಪ್ಪು ಚೈತನ್ಯಗಳು ಬೇಗನೆ ಹಿಂತೆಗೆಯಬೇಕಾಗಿದೆ. ಇದಕ್ಕಾಗಿ ಬೆಳಕಿನ ವಿಶ್ವ ಸಂಚಲನವನ್ನು ಪ್ರಾರಂಭಿಸಲಾಯಿತು. ಆದರೆ ಕಲಿಪುರುಷ ಇದಕ್ಕೆ ಅಡ್ಡಿಪಡಿಸುತ್ತಿದ್ದಾನೆ. ಅವನಿಗೆ 21ನೇ ಡಿಸೆಂಬರ್ 2009ರವರೆಗೆ ಕಪ್ಪು ಚೈತನ್ಯಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ. ಆದ್ದರಿಂದ ನಾವು ಹೆಚ್ಚು ಹೆಚ್ಚು ಬೆಳಕನ್ನು ತರಬೇಕಾಗಿದೆ. ಧ್ಯಾನಿಸಿ, ಬೆಳಕನ್ನು ಚಾನಲ್ ಮಾಡಿ. ಆಗ ಕತ್ತಲು ಶೀಘ್ರವಾಗಿ ಹಿಂತೆಗೆಯುತ್ತದೆ. ಕಪ್ಪು ಚೈತನ್ಯಗಳು ಹಿಂತೆಗೆಯುವಾಗ ಖಂಡಿತವಾಗಿ ಅನೇಕ ಅಡಚಣೆಗಳು, ಗದ್ದಲ ಕೆಡಕುಗಳನ್ನು ಉಂಟುಮಾಡುತ್ತವೆ. ಆದ್ದರಿಂದ ನಾವು ನಿಷೇಧಾತ್ಮಕ ಯೋಚನೆಗಳು ಮತ್ತು ಭಾವನೆಗಳನ್ನು ಪುರಸ್ಕರಿಸದಂತೆ ಎಚ್ಚರಿಕೆಯಿಂದಿರಬೇಕು.

ನಿರ್ಣಾಯಕ ದಿನ ಪ್ರಾರಂಭವಾಗುವಷ್ಟರಲ್ಲಿ ಅಂದರೆ 21ನೇ ಡಿಸೆಂಬರ್ 2009ರ ಒಳಗೆ ಮನುಕುಲ ಆಯ್ಕೆಯನ್ನು ಮಾಡಿಕೊಳ್ಳಬೇಕು. ನಾವು ಸಹಜವಾಗಿಯೇ ಒಳ್ಳೆಯದನ್ನು ಆರಿಸುತ್ತೇವೆ ಎಂದು ನಮ್ಮ ಅನಿಸಿಕೆ. ಆದರೆ ಜನರು ಇನ್ನೊಂದು ನೆಲೆಯಲ್ಲಿ ಕತ್ತಲೆಯ ಸುಖಗಳನ್ನು ಬಯಸುತ್ತಾರೆ ಎಂಬುದನ್ನು ನಾವು ಗಮನಿಸಿದ್ದೇವೆ. ಕತ್ತಲೆಯ ಕಡೆ ನಾವಿದ್ದರೆ ಅದು ಲೌಕಿಕ ನೆಲೆಯಲ್ಲಿ ಯಥೇಚ್ಛವಾಗಿ ನೀಡುತ್ತದೆ. ನಾವು ಪ್ರಜ್ಞಾಪೂರ್ವಕವಾಗಿ ಬೆಳಕನ್ನು ಆರಿಸಿಕೊಳ್ಳಬೇಕು. ಅದನ್ನು ಹಿಡಿದಿಟ್ಟುಕೊಂಡು ಬೇರೆ ನೆಲೆಗಳಿಗೂ ವಿಸ್ತರಿಸಬೇಕು. ನೀವು ದೃಢವಾಗಿದ್ದರೆ, ನೀವು ಬೆಳಕಿನೊಂದಿಗೆ ಇರುತ್ತೀರಿ. ನಿಮ್ಮನ್ನು ಯಾರೂ ಏನೂ ಮಾಡಲಾರರು. ಮುಂಬರುವ ದಿನಗಳಲ್ಲಿ ಭಗವಾನ್ ಕಲ್ಕಿ ಹೆಚ್ಚು ಸಕ್ರಿಯನಾಗಿದ್ದಾನೆ. ಯಾರು ಆ ಸಮಯದೊಳಗೆ ಬೆಳಕನ್ನು ಆರಿಸಿಕೊಳ್ಳುವುದಿಲ್ಲವೋ ಅಂಥವರು ನಾನಾ ಕಷ್ಟಗಳಿಗೆ ಗುರಿಯಾಗುತ್ತಾರೆ.

ಋಷಿಗಳು 'ಅಧರ್ಮವನ್ನು ತಿರಸ್ಕರಿಸಿ, ಮೌನವಾಗಿ ಅದನ್ನು ವಿರೋಧಿಸಿ' ಎಂದು ಹೇಳುತ್ತಲೇ ಇದ್ದಾರೆ. ಅವರು ಅಧರ್ಮದ ವಿರುದ್ಧ ಯುದ್ಧ ಮಾಡುತ್ತಿದ್ದಾರೆ. ಕತ್ತಲೆಯನ್ನು ಸಂಪೂರ್ಣವಾಗಿ ಅಳಿಸಿ ಹಾಕಲು ಈ ಹೋರಾಟವನ್ನು ಪ್ರಾರಂಭಿಸೋಣ. ಅದು ಬಹಳ ಕಷ್ಟಕರ. ನಿಮ್ಮದೇ ಆದ ರೀತಿಗಳನ್ನು ರೂಪಿಸಿಕೊಳ್ಳಿ.

**11–11–2009**

ನಾವು ಧ್ಯಾನದ ಪ್ರಭಾವವನ್ನು ನಿಜವಾಗಿಯೂ ನಮ್ಮ ಮೂಲಕ ಕೆಲಸ ಮಾಡಲು ಬಿಟ್ಟರೆ ಮತ್ತು ನಮ್ಮ ಜೀವನದಲ್ಲಿ ವ್ಯಕ್ತಪಡಿಸಿದರೆ ಪ್ರಯೋಜನಗಳು ಸಿಗುತ್ತವೆ. ಆಗ ನಮ್ಮ ಜೀವನದ ಪ್ರತಿಯೊಂದು ನೆಲೆಯಲ್ಲಿ ಪರಿಶುದ್ಧತೆ, ಪ್ರೇಮ ಮತ್ತು ಪ್ರಾಮಾಣಿಕತೆ ಬಿಂಬಿಸುತ್ತವೆ.

ಇದು ಬಹಳ ಮುಖ್ಯವಾದ ದಿವ್ಯಜ್ಞಾನ.

ಇತ್ತೀಚೆಗೆ ಒಬ್ಬ ಋಷಿ 'ವಿಶ್ವಕ್ಕೆ ನಿಮ್ಮ ಪ್ರೇಮವನ್ನು ಕೊಡಿ ಮತ್ತು ವಿಶ್ವ ನಿಮಗೆ ಎಲ್ಲವನ್ನೂ ಕೊಡುತ್ತದೆ' ಎಂದು ಹೇಳಿದರು. ಅದು ನಿಜವೇ. ನೀವು ಪ್ರಾಮಾಣಿಕವಾಗಿ ಪ್ರೇಮವನ್ನು ಪೂರ್ಣವಾಗಿ, ಶುದ್ಧವಾಗಿ ಕೊಡಿ ಆಗ ವಿಶ್ವವು ಪ್ರತಿಯಾಗಿ ಎಲ್ಲವನ್ನೂ ಕೊಡುತ್ತದೆ. ಇಂಥ ವಿಷಯಗಳನ್ನು ನಾವು ಅಭ್ಯಾಸ ಮಾಡಿದರೆ ನಾವು ಬಹಳ ಸಂತೋಷವಾಗಿ ಬದುಕಬಹುದು ಅಲ್ಲದೆ ಇತರರನ್ನು ಸಂತೋಷವಾಗಿರಲು ಬಿಡುತ್ತೇವೆ.

ಈ ವಿಶ್ವದಲ್ಲಿ ಒಂದು ಬಂಡೆ, ಭೂಮಿ, ಚಂದ್ರ, ಒಂದು ನಕ್ಷತ್ರ, ಒಂದು ಗ್ಯಾಲಕ್ಸಿ ಇತ್ಯಾದಿ ಎಲ್ಲವೂ ಜೀವಂತವಾಗಿವೆ. ಅವು ಅಸ್ತಿತ್ವಗಳು. ಅವುಗಳಲ್ಲಿ ಜೀವವಿದೆ. ಪ್ರತಿಯೊಂದೂ ಚೈತನ್ಯವಲಯವನ್ನು ಹೊಂದಿರುತ್ತದೆ. ಅದಕ್ಕೊಂದು ಕೇಂದ್ರವಿದೆ. ಆ ಕೇಂದ್ರಕ್ಕೆ ಬುದ್ಧಿಶಕ್ತಿ ಮತ್ತು ಪ್ರೇಮವಿದೆ. ಅದನ್ನು ಸಂಪರ್ಕಿಸಬಹುದು. ನಾವು ಒಂದು ಬಂಡೆ ಅಥವಾ ಯಾವುದೇ ನಿರ್ಜೀವ ವಸ್ತುವಿನೊಡನೆ ಮಾತನಾಡಬಹುದು. ನಾವು ಇಲ್ಲಿ ಹೇಳುವುದನ್ನೆಲ್ಲ ನೀವು ಒಪ್ಪಿಕೊಳ್ಳಬೇಕೆಂದೇನಿಲ್ಲ. ಆದರೆ ನೀವೇ ಪರೀಕ್ಷಿಸಿ ಮತ್ತು ಸ್ವಯಂಆಗಿ ಅನುಭವಿಸಬಹುದು. ಅದನ್ನು ಪ್ರಯತ್ನಿಸಿ. ನಾವು ಎಲ್ಲದರೊಂದಿಗೆ ಮಾತನಾಡಬೇಕು. ನಾವು ವಿಶ್ವದೊಡನೆ ಮಾತನಾಡಬೇಕು, ಅದರೊಡನೆ ಏಕತೆಯನ್ನು ಅನುಭವಿಸಬೇಕು. ನಾವು ವಿಶ್ವದೊಡನೆ ಏಕತೆಯನ್ನು ಅನುಭವಿಸಿದಾಗ, ನಾವು ದೇವರನ್ನು ಅನುಭವಿಸುತ್ತೇವೆ. ಇಂಥ ಒಂದು ಅನುಭವದಿಂದ ನಾವು ನಿಜವಾದ ವಿವೇಕ ಪಡೆಯುತ್ತೇವೆ. ಆಗ ನಾವು ಯಾವುದು ಸರಿ ಎಂಬುದನ್ನು ತಿಳಿದು, ಅದನ್ನು ಆರಿಸಿಕೊಂಡು ಅತ್ಯಂತ ಶಾಂತಿಯುತ ಮತ್ತು ಸುಖಮಯ ಜೀವನವನ್ನು ನಡೆಸಬಹುದು.

ಯಾವುದೇ ದೇವರಿಗೆ ಒಂದು ಆಕಾರವಿದೆ ಎಂಬುದನ್ನು ನಾವು ತಿಳಿದಿದ್ದೇವೆ. ನಾವು ಅಮರರನ್ನು "ಯಾವುದೇ ಆಕಾರವಿಲ್ಲದ ಪರಬ್ರಹ್ಮ ಹೇಗೆ ಕಾಣಿಸುತ್ತಾನೆ?" ಎಂದು ಕೇಳಿದಾಗ ಅವರು ಹೇಳಿದರು: "ಅತ್ಯಂತ ಪ್ರಕಾಶಮಾನವಾದ ಬೆಳಕನ್ನು ಕಲ್ಪಿಸಿಕೊಳ್ಳಿ, ಒಂದು ಅನಿಯಮಿತ ಬೆಳಕಿನಸಾಗರ, ಏಕಕಾಲಕ್ಕೆ ಲಕ್ಷಗಟ್ಟಲೆ ಬಾಂಬ್‌ಗಳು ಸಿಡಿಯುವುದನ್ನು ಕಲ್ಪಿಸಿಕೊಳ್ಳಿ, ಚಂಡಮಾರುತಗಳು, ಪ್ರವಾಹಗಳು, ನಗೆ ಎಲ್ಲ ಏಕಕಾಲಕ್ಕೆ ಸಂಭವಿಸುವುದನ್ನು ಊಹಿಸಿಕೊಳ್ಳಿ, ಅದೆಲ್ಲವೂ ದೇವರು." ನಾವು ವಿಶ್ವದ ಜೊತೆ ಏಕತೆಯನ್ನು ಅನುಭವಿಸಬೇಕು. ದೇವರನ್ನು ಅನುಭವಿಸಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್ ; ಅನುವಾದ: ಶಿವಪ್ರಕಾಶ್ ಎಲ್)

ಒಬ್ಬ ವ್ಯಕ್ತಿಗೆ ನಾನಾ ರೀತಿಯಲ್ಲಿ ದೀಕ್ಷೆ ಕೊಡಬಹುದು. ನಾವು ಚೈತನ್ಯಗಳನ್ನು ನೇರವಾಗಿ ಪ್ರಸಾರ ಮಾಡುತ್ತೇವೆ. ಋಷಿಗಳು ಇದನ್ನು ನಾನಾ ರೀತಿಯಲ್ಲಿ ಮಾಡುತ್ತಾರೆ. ಅದು ನಮಗೆ ಒಂದು ಆಘಾತಕರ ಸಂದರ್ಭದಲ್ಲಿ ಅಥವಾ ಒಂದು ಹಿತವಾದ ಆಶ್ಚರ್ಯ ಅಥವಾ ಒಂದು ಭಜನೆಯನ್ನು ಕೇಳುವಾಗ, ಒಂದು ಪುಸ್ತಕ ಓದುವಾಗ, ಅಥವಾ ಇನ್ನೊಬ್ಬ ವ್ಯಕ್ತಿಯೊಡನೆ ಮಾತನಾಡುವಾಗ ಸಂಭವಿಸಬಹುದು. ಆ ವ್ಯಕ್ತಿ ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಅಥವಾ ಮಾತನಾಡುವ ವಿಷಯ ಆಧ್ಯಾತ್ಮಿಕ ವಿಚಾರವೇ ಆಗಿರಬೇಕೆಂದೇನೂ ಇಲ್ಲ. ದೇವರು ತನ್ನ ಕೃಪೆಯನ್ನು ತೋರಿಸಲು ಲಕ್ಷಾಂತರ ಮಾರ್ಗಗಳಿವೆ ಎಂಬುದನ್ನು ಮನಗಾಣಬೇಕು.

---

ಮಾಯನ್ ಪಂಚಾಂಗದಲ್ಲಿ ಹೇಳಿರುವ ಭವಿಷ್ಯಗಳನ್ನು ದೂರದರ್ಶನ ತಪ್ಪಾಗಿ ವಾಖ್ಯಾನ ಮಾಡಿದೆ. ಅದು 2012ರಲ್ಲಿ ಪ್ರಪಂಚ ಕೊನೆಯಾಗುವುದೆಂದು ಹೇಳಿದೆ. ಈಗ ಭಯದ ಗುಂಡಿಯನ್ನು ಒತ್ತಲಾಗಿದೆ. ಇದಕ್ಕೆ ಪ್ರತಿಕ್ರಿಯೆ ಸ್ವಲ್ಪ ಸಮಯದಲ್ಲೇ ಇನ್ನೂ ಹೆಚ್ಚುತ್ತದೆ. ನಾವು ಈ ಸಂದರ್ಭದಲ್ಲಿ ಮಹತ್ವದ ಕೆಲಸ ಮಾಡಬೇಕಾಗಿದೆ. ಪ್ರಪಂಚ ಕೊನೆಗೊಳ್ಳುವುದಿಲ್ಲ, ಆದರೆ ತೀವ್ರ ಬದಲಾವಣೆಗಳಾಗುತ್ತವೆ ಎಂಬ ಮುಖ್ಯವಾದ ವಿಷಯವನ್ನು ಇತರರಿಗೆ ತಿಳಿಸಬೇಕು. ಆದ್ದರಿಂದ ಒತ್ತು ಕೊಡಬೇಕಾದುದು ಸಿದ್ಧತೆಯ ಮೇಲೆ ಹೊರತು ಹತಾಶೆ ಅಥವಾ ಭಯದ ಭಾವನೆಗಳ ಮೇಲಲ್ಲ. ಆದರೂ ಜನರ ಒಲವು ಅತಿರೇಕಗಳನ್ನು ನಂಬುವುದರಲ್ಲಿದೆ, ಪಾಸಿಟಿವ್ ವಿಷಯಗಳಲ್ಲಿ ಅಲ್ಲ. ನಾವು ಪ್ರತಿಯೊಬ್ಬರೂ ಯಾರಾದರೊಬ್ಬರನ್ನು ಪ್ರಜ್ಞಾಪೂರ್ವಕವಾಗಿ ಮಾರ್ಗದರ್ಶನ ಮಾಡುತ್ತಿರುತ್ತೇವೆ. ನಾನು, ಭವಿಷ್ಯದಲ್ಲಿ ಜನರನ್ನು ಮಾರ್ಗದರ್ಶಿಸುವುದಕ್ಕಾಗಿ ರಾ–ಗ್ರೂಪ್ ಸದಸ್ಯರಿಗೆ ತರಬೇತಿ ಕೊಡಬೇಕೆಂದಿದ್ದೇನೆ. ನೀವು ಈ ಮಾರ್ಗದ ಬಗ್ಗೆ ಮತ್ತು 2012ರ ಬಗ್ಗೆ ಕೂಲಂಕುಷವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ.

---

ಜನರು ಸಿದ್ಧತೆ ಮಾಡಿಕೊಳ್ಳದೇ ಹೋದರೆ, ಸಿಗುವ ಸಲಹೆಗಳನ್ನು ಆಲಿಸದೆ, ಆಧ್ಯಾತ್ಮಿಕವಾಗಿ ಕುಗ್ಗಿದರೆ, ಆಗ ಅವರು ನಾಶವಾಗುವರು. ಅವರು ನಮ್ಮ ಆಪ್ತ ಸ್ನೇಹಿತರಾಗಿರಬಹುದು ಅಥವಾ ಸಂಬಂಧಿಯಾಗಿರಬಹುದು. ಇದು ಯಾವುದೇ ವ್ಯಕ್ತಿಗೆ ಅತ್ಯಂತ ದೊಡ್ಡ ಸವಾಲು. ಇಂಥ ವಾಸ್ತವ ಸ್ಥಿತಿಯಲ್ಲಿ ನಾವು ಬದುಕಬೇಕಾಗಿದೆ. ಆದ್ದರಿಂದ ನಾವು ವೈರಾಗ್ಯವನ್ನು ಬೆಳೆಸಿಕೊಳ್ಳಬೇಕು. ಅವರಿಗಾಗಿ ನಾವು ನರಳುವುದಾಗಲಿ, ಕೀಳರಿಮೆಯಿಂದ ಬಳಲುವುದಾಗಲಿ ಅಗತ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಂತ ಆಧ್ಯಾತ್ಮಿಕ ಬಲದ ಮೇಲೆ ನಿಲ್ಲಬೇಕು. ತನ್ನ ಸ್ವಂತ ಬೆಳಕಿನಿಂದ ಬದುಕಬೇಕು.

ಈ ಮಾರ್ಗದಲ್ಲಿ ನಾವು ಸಂಖ್ಯೆಯ ಬಲವನ್ನು ನಂಬುವುದಿಲ್ಲ. ಗುಣಮಟ್ಟವನ್ನು ಮಾತ್ರ ನಂಬುತ್ತೇವೆ. ನಾವು ಪ್ರೇಮದಲ್ಲಿ ನಂಬಿಕೆಯಿಟ್ಟಿದ್ದೇವೆ ಮತ್ತು ಅನಗತ್ಯವಾಗಿ ವಿಸ್ತರಿಸಲು ಪ್ರಯತ್ನಿಸುತ್ತಿಲ್ಲ. ನಾವು ಸಹಜವಾಗಿ ಬೆಳೆಯುತ್ತೇವೆ ಮತ್ತು ವಿಸ್ತರಿಸುತ್ತೇವೆ. ಇದಕ್ಕೆ ನಾವು ಸರಿಯಲ್ಲದ ವಿದ್ಯಮಾನಗಳನ್ನು ಬಳಸುವುದಿಲ್ಲ.

---

ನಿಮ್ಮಲ್ಲಿ ಪ್ರತಿಯೊಬ್ಬರೂ, ಮುಖ್ಯವಾಗಿ ಸ್ವಯಂಸೇವಕರು ಮಾದರಿಯಾಗಿ ಬದುಕಬೇಕು. ನೀವು ಯಾವಾಗಲೂ ಬೆಳಕನ್ನು ಹೊಂದಿರಬೇಕು ಮತ್ತು ಶಾಂತಿಯ ಸಾಗರದಂತಿರಬೇಕು. ಅದನ್ನು ಇತರರು ಅನುಭವಿಸುವಂತಿರಬೇಕು. ಅವರು ನಿಮ್ಮಲ್ಲಿರುವ ಬೆಳಕನ್ನು ಅನುಭವಿಸುವಂತಿರಬೇಕು. ಆಗ ಮಾತ್ರ ನೀವು ನಿಮಗೆ ಮತ್ತು ಇತರರಿಗೆ ಮಾರ್ಗದರ್ಶಿಸಲು ಸಾಧ್ಯ. ಸ್ವಯಂಸೇವಕರು ತಮ್ಮ ಮಾತುಗಾರಿಕೆ, ಬರವಣಿಗೆ ಮತ್ತು ನಡತೆಗಳನ್ನು ವೃದ್ಧಿಪಡಿಸಿಕೊಳ್ಳಬೇಕು; ಹೆಚ್ಚು ಓದಬೇಕು.

---

ಜನರು ತಮ್ಮ ಜನ್ಮದಿನ/ವಾರ್ಷಿಕ ದಿನಗಳಲ್ಲಿ ನನ್ನನ್ನು ನೋಡಲು ಬಯಸುತ್ತಾರೆ. ಆದರೆ ನಾನು ಜನರನ್ನು ಭೇಟಿ ಮಾಡುವುದನ್ನು ನಿಲ್ಲಿಸಿದ್ದೇನೆ. ಇದರಿಂದ ಯಾರೂ ನಿರಾಶರಾಗಬೇಡಿ. ನಾನು ಅಶರೀರವಾಗಿ ಪ್ರತಿಯೊಬ್ಬರನ್ನು ಭೇಟಿಮಾಡಿ, ಋಷಿಗಳಿಂದ ದೊರಕುವ ಕಾಣಿಕೆಗಳನ್ನು ಮತ್ತು ಹೆಚ್ಚಿನ ಚೈತನ್ಯಗಳನ್ನು ಕೊಡುತ್ತೇನೆ. ನಾವು ನಮ್ಮ ವಿಚಾರ ವಿನಿಮಯವನ್ನು ಉನ್ನತ ನೆಲೆಗಳಿಗೆ ಬದಲಾಯಿಸಬೇಕು. ಅಲ್ಲಿ ನಾವು ಶಬ್ದಗಳಲ್ಲಿ ಹೇಳುವುದಕ್ಕಿಂತ ಹೆಚ್ಚು ತಲುಪಿಸಬಹುದು.

### 18–10–2009

ಸಾಧನೆಯಲ್ಲಿ ಮೂರು ಭಾಗಗಳಿವೆ. ಒಂದು ಸಿದ್ಧತೆ, ಎರಡನೆಯದು ಅನುಭವಿಸುವಿಕೆ ಮತ್ತು ಮೂರನೆಯದು ವ್ಯಕ್ತಪಡಿಸುವಿಕೆ. ನಾವು ಮೊದಲು ಅನುಭವಿಸಲು ಸಿದ್ಧತೆ ಮಾಡಿಕೊಳ್ಳುತ್ತೇವೆ. ಸಿದ್ಧತೆ ಎಂದರೆ ನಿಶ್ಚಲತೆಯನ್ನು ಪ್ರತಿಷ್ಠಾಪಿಸುವುದು. ಆಗ ನಾವು ದೈವಿಕತೆಯನ್ನು ಅನುಭವಿಸುತ್ತೇವೆ. ಅಂದರೆ ಪ್ರೇಮ, ಅನಂತತೆ ಮತ್ತು ವಿಶಾಲತೆಗಳನ್ನು ಅನುಭವಿಸುತ್ತೇವೆ. ನಾವು ಬೆಳಕನ್ನು ಅನುಭವಿಸುವಾಗ ಈ ಮೂರೂ ಒಂದೇ ಕಾಲಕ್ಕೆ ಅನುಭವವಾಗುತ್ತವೆ. ಅನುಭವಿಸುವಿಕೆಯ ನಂತರ, ಬಹಳ ಮುಖ್ಯವಾದ ವಿಷಯವೆಂದರೆ, ನಾವು ಅನುಭವಿಸಿದ ಎಲ್ಲ ವಿಷಯವನ್ನು ವ್ಯಕ್ತಪಡಿಸುವುದು. ನಮ್ಮ ಜೀವನದಲ್ಲಿ ಈ ಅನುಭವವನ್ನು ವ್ಯಕ್ತಪಡಿಸದೇ ಹೋದರೆ, ಸಾಧನೆ ಅಪೂರ್ಣವಾಗಿ ಉಳಿಯುತ್ತದೆ.

---

ನಾವು ನಮ್ಮ ಬದುಕನ್ನು ನಮ್ಮ ವಿವೇಕ ಮತ್ತು ಅಂತಃಶಕ್ತಿಯಿಂದ ಮುನ್ನಡೆಸುತ್ತೇವೆ.

ಕೆಲವು ಸಲ ಇವು ಇಲ್ಲವಾದರೆ ತಪ್ಪುಗಳನ್ನು ಮಾಡುತ್ತೇವೆ. ಆಗ ಅವುಗಳನ್ನು ಉನ್ನತ ಮೂಲದಿಂದ ಪಡೆಯಬೇಕಾಗುತ್ತದೆ. ಇದು ನಾವು ಧ್ಯಾನ ಮಾಡುವುದರಿಂದ ಸಾಧ್ಯ. ವಿವೇಕ ಮತ್ತು ಅಂತಃ ಶಕ್ತಿಗಳ ಮೂಲವೆನಿಸಿದ ದೈವದೊಡನೆ ಧ್ಯಾನ ಎಲ್ಲ ಕಾಲದಲ್ಲಿಯೂ ಸಂಪರ್ಕ ಕಲ್ಪಿಸುತ್ತದೆ. ಅತ್ಯಂತ ಮುಖ್ಯವಾದ ವಿಷಯವೆಂದರೆ ನಾವು ಯಾವಾಗಲೂ ಈ ಸಂಪರ್ಕದ ಅರಿವನ್ನು ಹೊಂದಿರಬೇಕು. ಈ ಸಂಪರ್ಕದ ಅರಿವಿನಿಂದ ನಾವು ದೈವಿಕರಾಗಿ, ದೈವಿಕತೆಯಿಂದ ನಡೆದುಕೊಳ್ಳುತ್ತೇವೆ.

---

ಈಗ ಪ್ರತಿಯೊಬ್ಬರೂ 2012ರ ಬಗ್ಗೆ ಮಾತನಾಡಲಾರಂಭಿಸಿದ್ದಾರೆ. ಜನರ ಮನಸ್ಸಿನಲ್ಲಿ ಭಯ–ಆತಂಕಗಳು ಇನ್ನೂ ಹೆಚ್ಚಾಗಬೇಕಿದೆ. ಆದರೆ ಅದರ ಬಗ್ಗೆ ಎಲ್ಲಕಡೆ ಚರ್ಚೆ ನಡೆಯುತ್ತಿದೆ. ಈ ಚರ್ಚೆ ಎಲ್ಲರಲ್ಲೂ ಕುತೂಹಲ ಕೆರಳಿಸಿದೆ. ಭಯ ನಮ್ಮನ್ನು ದುರ್ಬಲಗೊಳಿಸುತ್ತದೆ. ನಾವು ದುರ್ಬಲರಾದರೆ ಕಪ್ಪು ಚೈತನ್ಯಗಳು ನಮ್ಮೊಳಗೆ ಪ್ರವೇಶ ಮಾಡಿ, ನಮ್ಮನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುತ್ತವೆ, ಆಗ ನಾವು ಕಪ್ಪುಚೈತನ್ಯಗಳ ಚಾನಲ್‌ಗಳಾಗುತ್ತೇವೆ.

---

"ಇದು ಹುಸಿ ಪ್ರವಾದಿಗಳ ಕಾಲವೂ ಸಹ," ಎಂದು ಋಷಿಗಳು ಹೇಳುತ್ತಾರೆ.

ಪ್ರತಿಯೊಬ್ಬರೂ ಮನುಕುಲವನ್ನು ಉಳಿಸಲು ಪ್ರಯತ್ನಿಸುವರು. ಈಗ ಹಿಂದೆಂದಿಗಿಂತ ಹೆಚ್ಚಿನ ಸೂಚನೆಗಳು ಮತ್ತು ಹೆಚ್ಚು ಸಂದೇಶಗಳಿರುತ್ತವೆ. ಎಲ್ಲವನ್ನೂ ಕೇಳಿಸಿಕೊಳ್ಳಬೇಕು, ಅತ್ಯುತ್ತಮವಾದದ್ದನ್ನು ಆರಿಸಿಕೊಂಡು ಅದನ್ನು ಅನುಸರಿಸಬೇಕು.

### 25–10–2009

ನಾವು ಇಲ್ಲಿ ಹೇಳುವ ಮಾತುಗಳ ಮತ್ತು ಲಿಖಿತ ಶಬ್ದಗಳ ಹಿಂದೆ ಹೆಚ್ಚಿನ ಚೈತನ್ಯಗಳಿವೆ. ಈ ಚೈತನ್ಯಗಳನ್ನು ನೀವು ಒಪ್ಪಿಕೊಂಡರೆ ಅವು, ನಾನು ಪ್ರಯತ್ನಪಟ್ಟು ನಿಮಗೆ ತಿಳಿಯಪಡಿಸುವುದಕ್ಕಿಂತ ಹೆಚ್ಚಿನ ವಿಷಯಗಳನ್ನು, ನಿಮಗೆ ತಿಳಿಯಪಡಿಸುತ್ತವೆ. ನಾವು ಯಾವ ಮಟ್ಟದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ? ಯಾವ ಮಟ್ಟದಲ್ಲಿ ಆಯ್ಕೆಗಳನ್ನು ಮಾಡುತ್ತೇವೆ? ಇವನ್ನು ನಾನು ಇನ್ನೊಂದು ನೆಲೆಯಿಂದ, ಸೂಕ್ಷ್ಮ ನೆಲೆಯಲ್ಲಿ ನೋಡಿ ಹೇಳುತ್ತಿದ್ದೇನೆ. ನಾನು, ಜನ ಅವರದೇ ಆದ ರೀತಿಯಲ್ಲಿ ಬದುಕುವುದನ್ನು, ಭೌತಿಕ ನೆಲೆಯಲ್ಲಿ ಕೂಡಾ ಗಮನಿಸುತ್ತೇನೆ. ಇವೆರಡರಲ್ಲಿ ನಾನು ಬಹಳ ವ್ಯತ್ಯಾಸಗಳಿರುವುದನ್ನು ಕಂಡಿದ್ದೇನೆ. ಜನರು ಭೌತಿಕ ನೆಲೆಯಲ್ಲಿರುವುದಕ್ಕಿಂತ ಸೂಕ್ಷ್ಮ ನೆಲೆಯಲ್ಲಿ ಭಿನ್ನರಾಗಿರುತ್ತಾರೆ. ಈ ಅಂಶವನ್ನು ನಾವು ಅಭ್ಯಾಸ ಮಾಡುತ್ತಿದ್ದೇವೆ.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ಪಾಂಡುರಂಗ**

ಇತ್ತೀಚಿನ ದಿನಗಳಿಂದ ನನ್ನೊಳಗೆ ನಾನು ವಿಮರ್ಶಿಸಿಕೊಳ್ಳುವುದು ಮತ್ತು ಶಾಂತತೆಯಿಂದ ಇರುವುದು ಹೆಚ್ಚಾಗಿದೆ. ನನ್ನಲ್ಲಿದ್ದ ಆತಂಕಗಳು ಅಥವಾ ನಕಾರಾತ್ಮಕ ಭಾವನೆಗಳು ಈಗ ಇಲ್ಲ. ನನಗೆ ನಕಾರಾತ್ಮಕ ಭಾವನೆಗಳು ಗೋಚರಿಸುತ್ತಿದ್ದು, ಅವುಗಳನ್ನು ದಾಟಲು ನಾನಿನ್ನೂ ಬಹಳ ಪ್ರಯತ್ನಿಸಬೇಕಾಗಿದೆ. ನಮ್ಮೊಂದಿಗೆ ಒಳ್ಳೆಯದಾದ ಎಲ್ಲವನ್ನೂ ಹಂಚಿಕೊಳ್ಳುತ್ತಿರುವ ನಿಮಗೆ ನನ್ನ ಕೃತಜ್ಞತೆಗಳು. – ದೀಪ್ತಿ

ನವಂಬರ್ ತಿಂಗಳ ವಾರ್ತಾಪತ್ರ ಓದುತ್ತಿದ್ದ ಹಾಗೇ, ಪತ್ರಿಕೆಯಿಂದ ನಿಮ್ಮ ಪ್ರೀತಿ ಹೊರ ಹೊಮ್ಮಿ, ನನ್ನ ಅಂತರಂಗವನ್ನು ಸ್ಪರ್ಶಿಸಿದ ಭಾಸವಾಯಿತು. ಅಂದಿನಿಂದ ಯಾವುದೇ ನಕಾರಾತ್ಮಕ ಭಾವನೆಗಳು ನನ್ನ ಹತ್ತಿರ ಸುಳಿಯುವುದಿಲ್ಲ ಎಂಬ ಧೃಡ ನಂಬಿಕೆ ನನಗಿದೆ. ಅಸ್ತವ್ಯಸ್ತ ಮನಸ್ಕ ಸ್ನೇಹಿತೆಯೊಬ್ಬಳು ನೆಗೆಟಿವ್‌ಆಗಿ ಮಾತನಾಡಿದರೂ, ನಾನು ಕ್ಷೋಭೆಗೊಳ್ಳದೆ ನಮ್ರತೆಯಿಂದ ಅವಳಿಗಾಗಿ ಪ್ರಾರ್ಥಿಸಿದೆ. ನಿಮ್ಮ ಎಲ್ಲ ಮಾರ್ಗದರ್ಶನ ಸೂತ್ರಗಳನ್ನು ಶ್ರದ್ಧೆಯಿಂದ ಅನುಸರಿಸುವ ಮೂಲಕವಷ್ಟೇ ನನ್ನ ಕೃತಜ್ಞತೆಗಳನ್ನು ಸಲ್ಲಿಸಬಹುದು. –ಪದ್ಮಜಾ ಬಾಲಾಜಿ

ನಾನು ಪ್ರಾರಂಭಿಕ ಧ್ಯಾನಿಯಾದರೂ, ನಾನೀಗ ಶಾಂತತೆಯಿಂದ ಪ್ರೀತಿಯನ್ನು ಅನುಭವಿಸುತ್ತಾ, ಅದನ್ನು ಹರಡಲು ಸಾಧ್ಯವಾಗಿದೆ. ಧ್ಯಾನ ಮಾಡುವಾಗ, ಯೋಚನೆಗಳು ಬಹಳಷ್ಟು ಕಡಿಮೆಯಾಗಿದೆ. ಬೇರೆಯವರ ಸ್ವಾತಂತ್ರ್ಯವನ್ನು ಗೌರವಿಸಲು ಕಲಿಯುತ್ತಿದ್ದೇನೆ. ಈಗ ಜೀವನ ಸುಂದರವೆನಿಸಿದೆ. ಧ್ಯಾನ ಮಾಡುವ ಸಮಯದಲ್ಲಿ ಅಡಚಣೆಗಳುಂಟಾದರೆ ಋಷಿಗಳಿಗೆ ಮತ್ತು ದೇವರಿಗೆ ಪ್ರಾರ್ಥಿಸುತ್ತೇನೆ. ತೊಂದರೆಗಳು ಆಶ್ಚರ್ಯಕರವಾಗಿ ಮಾಯವಾಗುತ್ತವೆ. – ಹೇಮಂತ್ ಶರ್ಮಾ

ನಾನು ಮಾಡುತ್ತಿದ್ದ ಚುನಾವಣೆ ಕೆಲಸ ಒಂದು ಕನಸೇನೋ ಎಂಬಂತೆ ಸಾಗುತ್ತಿತ್ತು. ಪ್ರತಿ ಕ್ಷಣದಲ್ಲೂ ನಿಮ್ಮ ರಕ್ಷಣೆಯನ್ನು ಅನುಭವಿಸುತ್ತಿದ್ದೆ. ಅಲ್ಲಿದ್ದ ಜನರೆಲ್ಲರೂ ಹೃದಯಪೂರ್ವಕವಾಗಿ ಸಹಾಯ ಮಾಡಿದರು. ಪ್ರಾರಂಭದಲ್ಲಿ ಒಂದು ತಂಡವಾಗಿ ಕೆಲಸ ಮಾಡುತ್ತಿದ್ದ ನಾವು, ಚುನಾವಣೆ ಕೆಲಸ ಅಂತ್ಯವಾಗುವ ಹೊತ್ತಿಗೆ ಒಂದೇ ಕುಟುಂಬದ ಸದಸ್ಯರಂತಾದೆವು. –ರವಿ

ನನ್ನ ಜೀವನದಲ್ಲಿ ಧ್ಯಾನ, ಒಂದು ಅದ್ಭುತ ಅನುಭವ. ಧ್ಯಾನ, ನನ್ನ ವ್ಯಕ್ತಿತ್ವವನ್ನೇ ಬದಲಾಯಿಸಿದೆ. ನನ್ನ ಕೋಪ ಬಹಳಷ್ಟು ಕಡಿಮೆಯಾಗಿ ಅನಾವಶ್ಯಕ ಯೋಚನೆಗಳು ಬರುವುದು ನಿಂತಿವೆ. ಚಿಕ್ಕಪುಟ್ಟ ಆತಂಕಗಳು ನನ್ನನ್ನು ತಲ್ಲಣಗೊಳಿಸುವುದಿಲ್ಲ. ನನ್ನ ಮನಸ್ಸು ಯಾವಾಗಲೂ ಪ್ರಶಾಂತವಾಗಿರುತ್ತದೆ. – ಪ್ರಾಚಿ ಷೇಡೆಕರ್

ನಾನು ವಸಿಷ್ಠ ಮಹರ್ಷಿಗಳೊಂದಿಗೆ ಸಂಪರ್ಕ ಹೊಂದಲು ಪ್ರಯತ್ನಿಸುತ್ತಿದ್ದಾಗ ಭವ್ಯ ಬಂಗಲೆಯೊಂದರ ಮೆಟ್ಟಿಲುಗಳನ್ನು ಹತ್ತುತ್ತಿದ್ದಂತೆ ಕಾಣಿಸಿತು. ಅಲ್ಲಿ ಕುಳಿತಿದ್ದ ಎಲ್ಲರೂ ಶ್ವೇತವಸ್ತ್ರಧಾರಿಯಾಗಿದ್ದರು. ಬಹುಶಃ ಅದೊಂದು ಆಶ್ರಮವಿರಬೇಕೆಂದುಕೊಂಡೆ. ನಿಮ್ಮನ್ನು ಭೇಟಿಮಾಡಿ ಆಶೀರ್ವಾದ ಪಡೆಯಲು ಸಾಧ್ಯವಾಗಿಸುವಂತೆ ವಸಿಷ್ಠ ಮಹರ್ಷಿಗಳನ್ನು ಪ್ರಾರ್ಥಿಸಿದೆ. ಆ ಕ್ಷಣ ಒಂದು ಶಕ್ತಿ ನನ್ನ ತಲೆಯನ್ನು ಸ್ಪರ್ಶಿಸಿದಂತೆ ಮತ್ತು ಪ್ರವೇಶಿಸಿದಂತೆ ಅನಿಸಿತು. ನನ್ನ ಪ್ರಾರ್ಥನೆ ಈಡೇರಿದಂತೆ ಅನಿಸಿತು. –ಮೇಧ ಕುಲಕರ್ಣಿ

ನಿಮ್ಮ "ಒಂದು ಮುಖ್ಯ ಟಿಪ್ಪಣಿ" ನನ್ನನ್ನು ಎಚ್ಚರಿಸಿದೆ. ಅದರಲ್ಲಿರುವ ಸೂಚನೆಗಳನ್ನು ಅನುಸರಿಸುತ್ತಿರುವುದರ ಫಲವಾಗಿ ನನ್ನ ಖಿನ್ನ ಸ್ಥಿತಿ ಮತ್ತು ಧ್ಯಾನಮಾಡುವಾಗ ಎದುರಾಗುತ್ತಿದ್ದ ತೊಂದರೆಗಳು ಇಲ್ಲವಾಗಿವೆ. 'Beyond 2012' ಪುಸ್ತಕ, ಇದು ವಿಷಮಕಾಲ ಎಂಬ ಅರಿವುಂಟುಮಾಡಿದೆ. ಯಾವುದೇ ಮುಖ್ಯವಾದ ವಿಷಯಗಳನ್ನು ಕಾರ್ಯರೂಪಕ್ಕೆ ತರುವ ಅವಶ್ಯಕತೆ ಹಿಂದೆಂದಿಗಿಂತ ಇಂದು ಹೆಚ್ಚಾಗಿದೆ ಎಂಬುದನ್ನು ಈ ಪುಸ್ತಕದಲ್ಲಿ ನೀವು ಧೃಡೀಕರಿಸಿರುವಿರಿ. –ಯಾಸೂಜಿ ಯಾಮಾಗುಚಿ

ನಿಮ್ಮನ್ನು ಗುರುವಾಗಿ ಪಡೆಯಲು ನಾನು ಪುಣ್ಯ ಮಾಡಿದ್ದೇನೆ. ನಾನು ಇದ್ದಂತಹ ಸ್ಥಿತಿಯಲ್ಲಿಯೇ ನನ್ನನ್ನು ನಿಮ್ಮ ವಿದ್ಯಾರ್ಥಿಯಾಗಿ ಒಪ್ಪಿಕೊಂಡಿರಿ. ಇದಕ್ಕೆ ನನ್ನ ಕೃತಜ್ಞತೆಗಳನ್ನು ತಿಳಿಸಲು ಪದಗಳೇ ಇಲ್ಲ. ನಿಮ್ಮಿಂದ ದೀಕ್ಷೆ ಪಡೆದ ಮರುದಿನವೇ ಮೂರು ಗಂಟೆಗಳ ಕಾಲ ಅನಾಯಾಸವಾಗಿ ಧ್ಯಾನ ಮಾಡಲು ಸಾಧ್ಯವಾಗಿದೆ. ಧ್ಯಾನದ ಸಮಯದಲ್ಲಿ ನನ್ನ ಅನಾಹತ ಚಕ್ರದಲ್ಲಿ ಮತ್ತು ದೇಹದ ಇತರ ಭಾಗಗಳಲ್ಲಿ ಕಂಪನಗಳು ಉಂಟಾಗುತ್ತವೆ. ಕೆಲವೇ ಕ್ಷಣಗಳಲ್ಲಿ ನನ್ನ ದೇಹ ತಾನೇ ತಾನಾಗಿ ಧ್ಯಾನಾಸಕ್ತವಾಗುತ್ತದೆ. ಈ ಪ್ರಕ್ರಿಯೆಯನ್ನು ನಾನು ಬಹಳವಾಗಿ ಆನಂದಿಸುತ್ತೇನೆ. –ವಿದ್ಯಾ ವಿಶ್ವಾಮಿತ್ರ

ಧ್ಯಾನ ತೆಗೆದುಕೊಂಡ ನಂತರ ನನ್ನಲ್ಲಿ ಆಗಿರುವ ಬದಲಾವಣೆಗಳನ್ನು ಗಮನಿಸಿದರೆ ನನಗೆ ಆಶ್ಚರ್ಯವಾಗುತ್ತದೆ. ಜೊತೆಗೆ ಸಂತೋಷವೂ ಆಗುತ್ತದೆ. ನಾನು ಇನ್ನೂ ಬದಲಾಗಬೇಕು ಮತ್ತು ಬೆಳೆಯಬೇಕು. ಇದಕ್ಕಾಗಿ ನಾನು ಬಹಳ ಪ್ರಯತ್ನಿಸುತ್ತಿದ್ದೇನೆ. ನಿಮ್ಮ ಎಲ್ಲಾ ಸಹಾಯಕ್ಕಾಗಿ ಕೃತಜ್ಞತೆಗಳು. – ಶ್ರೀಯಾ

ನನ್ನ ಸಹನಾಶಕ್ತಿಯು ಈಗ ಹೆಚ್ಚಾಗಿದ್ದು ನನ್ನಲ್ಲಿದ್ದ ಕೋಪ ಅಸಾಧಾರಣ ರೀತಿಯಲ್ಲಿ ಕಡಿಮೆಯಾಗಿದೆ. ಈ ಕೀರ್ತಿ ಧ್ಯಾನ ಮತ್ತು ಋಷಿಗಳಿಗೆ ಸಲ್ಲುತ್ತದೆ. –ಅನುಶ್ರೀ ರಮೇಶ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಶಾಶ್ವತ ಬದುಕು ಎಂದರೇನು?**

ಉ: ಶಾಶ್ವತ ಬದುಕು ಎಂದರೆ ಒಂದೇ ಭೌತಿಕ ದೇಹದಲ್ಲಿ ಎಲ್ಲಾ ಕಾಲಕ್ಕೂ ಬದುಕುವುದು ಎಂದಲ್ಲ. ಆದರೆ ಸಾವು ಬದುಕಿನ ಸರಪಳಿಯಿಂದ ಎಂದೆಂದಿಗೂ ಪಾರಾಗುವುದು. ಅದು 'ಶಾಶ್ವತ'ದೊಂದಿಗೆ ಹೊಂದಿಕೊಳ್ಳುವುದು.

**ಪ್ರ: ಚೈತನ್ಯಗಳು ಮತ್ತು ಕಂಪನಗಳು ವಿಭಿನ್ನವೇ?**

ಉ: ಕೆಲವು ಘಟ್ಟಗಳಲ್ಲಿ ಅವು ವಿಭಿನ್ನ. ನಮ್ಮಲ್ಲಿ ಸಂಗ್ರಹಿಸಿರುವ 'ರಾ' ಚೈತನ್ಯಗಳನ್ನು ನಾವು ಈ ಭೂಮಿಗೆ ಇನ್ನೂ ಬಿಡುಗಡೆ ಮಾಡಿಲ್ಲ. ಆದರೂ ಅದರ ಕಂಪನಗಳು ಈ ಭೂಮಿಯನ್ನು ತಲುಪಿವೆ. ಈ ಹಂತದಲ್ಲಿ ನಾವು ಚೈತನ್ಯ ಬೇರೆ, ಮತ್ತು ಕಂಪನಗಳು ಬೇರೆ ಎಂದು ಹೇಳಬೇಕಾಗುತ್ತದೆ. ಆದರೆ ಅಂತರಾಳದಲ್ಲಿ ಚೈತನ್ಯವೇ ಕಂಪನವಾಗಿರುತ್ತದೆ.

**ಪ್ರ: ನಾನು ದೀರ್ಘಕಾಲ ಧ್ಯಾನ ಮಾಡಬಹುದೇ?**

ಉ: ಹೌದು. ಅದು ಒಳ್ಳೆಯದು. 3 ಘಂಟೆ ಧ್ಯಾನ ಮಾಡಿ, ಸಕಾರಾತ್ಮತೆಗೆ ಹೆಚ್ಚು ಒತ್ತುಕೊಡಿ, ಶಂಬಲ ತತ್ವಗಳನ್ನು ಅಭ್ಯಸಿಸಿ, ಬೆಳಕನ್ನು ಚಾನಲ್ ಮಾಡಿ. ನಿಯಮಿತವಾಗಿ ಆತ್ಮವಿಮರ್ಶೆ ಮಾಡಿಕೊಳ್ಳಿ. ನಮ್ಮ ಧ್ಯಾನದ ಹಂತ ಯಾವುದೇ ಇರಲಿ, ಆ ಘಟ್ಟದಿಂದ ನಾವು ಬದಲಾಗಬೇಕು.

**ಪ್ರ: ನಾವು ಮುಕ್ತಿಯನ್ನು ಪಡೆಯುವ ಮೊದಲು 'ಬೆಳಕಿನ ದೇಹ'ಗಳಾಗಿ ಪರಿವರ್ತನೆಗೊಳ್ಳಬೇಕೇ?**

ಉ: ಮುಕ್ತಿಯನ್ನು ಮತ್ತು 'ಬೆಳಕಿನ ದೇಹ' ಪಡೆಯುವುದು, ನಾವು ಪರಿಶುದ್ಧರಾದಾಗ ಮಾತ್ರ. ಇದು ಸ್ವಾಭಾವಿಕ ಮತ್ತು ಯಾಂತ್ರಿಕ. ನಾವು ಮೊದಲು ಬೆಳಕಿನ ದೇಹಗಳಾಗಿ ಪರಿವರ್ತನೆಗೊಂಡ ನಂತರ ಮುಕ್ತಿಯನ್ನು ಪಡೆಯುತ್ತೇವೆ.

**ಪ್ರ: 'ಬೆಳಕಿನ ದೇಹ'ದ ಬಣ್ಣವೇನು?**

ಉ: ಸಾಮಾನ್ಯವಾಗಿ ಬಿಳಿ. ಆದರೆ ಕೆಲವು ಸಲ ಅದರ ಮೂಲವನ್ನು ಅವಲಂಭಿಸಿ ಅದು ಚಿನ್ನದ ಬಣ್ಣ, ನೀಲಿ ಅಥವಾ ಹಸಿರು ಬಣ್ಣದ್ದಾಗಿರುತ್ತದೆ.

**ಪ್ರ: 2018ರ ನಂತರವೂ ಪ್ರಾಣಿಗಳು ತಮ್ಮ ಭೌತಿಕ ದೇಹದಲ್ಲಿಯೇ ಬದುಕುತ್ತವೆಯೇ?**

ಉ: ಹೊಸ ಮತ್ತು ಹಲವಾರು ಜಾತಿಗಳ ಪ್ರಾಣಿಗಳು ಇರುತ್ತವೆ. ಅದೇ ಪ್ರಾಣಿಗಳ ಅಸ್ತಿತ್ವವೂ ಮುಂದುವರೆಯಬಹುದು.

**ಪ್ರ: ಸತ್ಯಯುಗದ ಬದಲಾವಣೆಯ ಕಾಲ ಕಡಿಮೆಗೊಳಿಸಿರುವುದರಿಂದ ನಿಮ್ಮ ಮತ್ತು ಅಮರರವರ ಯೋಜನೆಗಳು ಬದಲಾಗುತ್ತವೆಯೇ?**

ಉ: ನಾವು ಸ್ಪಷ್ಟವಾಗಿ ತಿಳಿಯಬೇಕಾಗಿರುವ ಅಂಶವೆಂದರೆ " ಈ ವಿಶ್ವದಲ್ಲಿ ಇರುವುದು ಒಂದೇ ಒಂದು ಯೋಜನೆ. ಅದು ದೈವೀ ಯೋಜನೆ." ಬದಲಾವಣೆಯ ಕಾಲ ಕಡಿತಗೊಳಿಸಿರುವುದರಿಂದ ಸೃಷ್ಟಿಯಲ್ಲಿ ಅನೇಕ ತಿದ್ದುಪಡಿಗಳು ಆಗುತ್ತವೆ. ಅನೇಕ ಸನ್ನಿವೇಶಗಳು ಸಂಭವಿಸುತ್ತವೆ. ಸ್ವಾಭಾವಿಕವಾಗಿ ನಮ್ಮ ಯೋಜನೆಗಳೂ ಬದಲಾಗುತ್ತವೆ.

**ಪ್ರ: ಮಾಧ್ಯಮಗಳು 2012ರ ಬಗ್ಗೆ ಏಕೆ ಮೌನವಾಗಿವೆ?**

ಉ: 2012ರ ಬಗ್ಗೆ ಬಹಳ ಮಾಹಿತಿಯನ್ನು 'ಹೊಸ ಯುಗ'ಕ್ಕಾಗಿ ಕೆಲಸಮಾಡುವವರು ಸಂಗ್ರಹಿಸಿದ್ದಾರೆ. ಆದರೆ ಮಾಧ್ಯಮಗಳು ಅವನ್ನು ತಿಳಿಸುತ್ತಿಲ್ಲ. ಈ ಸಮಾಚಾರಗಳನ್ನು ಪ್ರಜ್ಞಾಪೂರ್ವಕವಾಗಿ ಮತ್ತು ಉದ್ದೇಶಪೂರ್ವಕವಾಗಿ ತಡೆಹಿಡಿಯಲಾಗಿದೆ. ಸರ್ಕಾರಗಳೂ ಇದನ್ನು ಪ್ರಚೋದಿಸುತ್ತವೆ. ಅವರಿಗೆ ಅವರದೇ ಆದ ಉದ್ದೇಶಗಳಿರುತ್ತವೆ.

**ಪ್ರ: ಬದಲಾವಣೆಯಾಗದ ಜನರು 2012ರ ನಂತರವೂ ಅವರ ಸಹಜ ಅಂತ್ಯ ಬರುವ ತನಕ ಈ ಭೂಮಿಯ ಮೇಲೆ ಬದುಕು ಮುಂದುವರಿಸಬಹುದೇ?**

ಉ: ಅವರು ಇಲ್ಲಿ ಬದುಕು ಮುಂದುವರಿಸಲು ಸಾಧ್ಯವಿಲ್ಲ.

**ಪ್ರ: ಅಮರರವರು ಸಾವಿನ ನಂತರ ಸೂಕ್ಷ್ಮ ದೇಹವು ಮುಷ್ಠಿ ಗಾತ್ರಕ್ಕೆ ಕುಗ್ಗುವುದೆಂದು ಹೇಳಿದ್ದಾರೆ. ಅದು ಹಾಗೆಯೇ ಈ ಭೂಮಿ ಮೇಲೆ ಮರುಜನ್ಮ ಪಡೆಯುವ ತನಕ ಉಳಿಯುವುದೇ?**

ಉ: ಒಮ್ಮೆ ಸಾವು ಸಂಭವಿಸಿದರೆ ಅಲ್ಲಿ ನಮ್ಮ ಸೂಕ್ಷ್ಮ ದೇಹ ಪ್ರತ್ಯೇಕವಾಗುತ್ತದೆ. ಅದು ಮುಷ್ಠಿ ಗಾತ್ರಕ್ಕೆ ಕುಗ್ಗುತ್ತದೆ. ಆಮೇಲೆ ಅದು ಬೇರೆ ಭೂಮಿಗೆ ಪಯಣಿಸಿ, ಅಲ್ಲಿ ಒಂದು ಆಕಾರವನ್ನು ಪಡೆದು, ವಿಶ್ರಾಂತಿ ಪಡೆಯುತ್ತದೆ. ವಿಶ್ರಾಂತಿ ಕಾಲ ಕಳೆದಮೇಲೆ, ಅದು ಪಡೆದಿರುವ ದೇಹವನ್ನು ಬಿಟ್ಟು, ಈ ಭೂಮಿಯ ಮೇಲೆ ಮರುಜನ್ಮ ಪಡೆಯುತ್ತದೆ.

**ಪ್ರ: ಉನ್ನತ ಆತ್ಮ ತನ್ನ ಸ್ತರದಲ್ಲಿ ಕರ್ಮಗಳನ್ನು ಆಕರ್ಷಿಸುತ್ತದೆಯೆ?**

ಉ: ಆ ಸರದಲ್ಲಿನ ಕರ್ಮಗಳ ನಿಯಮಗಳು ನಮಗೆ ತಿಳಿದಿಲ್ಲ. ಉನ್ನತ ಆತ್ಮ ಆ ಸ್ತರದಲ್ಲಿನ ನಿಯಮವನ್ನು ಅನುಸರಿಸುತ್ತದೆ.


**ಪ್ರ: ಅದರ ಅಲ್ಲಿಯ ಬದುಕು ಇಲ್ಲಿ ನಮ್ಮ ಮೇಲೆ ಪರಿಣಾಮ ಬೀರುವುದೇ?**

ಉ: ಹೌದು. ಆದರೆ ಉನ್ನತ ಆತ್ಮ ಯಾವಾಗಲೂ ಆಧ್ಯಾತ್ಮಿಕ ಬೆಳವಣಿಗೆಯ ಚಟುವಟಿಕೆಯಲ್ಲಿ ತೊಡಗಿರುತ್ತದೆ. ಅತ್ಯುನ್ನತ ಮಟ್ಟದಲ್ಲಿ 'ಉನ್ನತ ಆತ್ಮ' ಯಾವಾಗಲೂ ಧ್ಯಾನ, ತಪಸ್ಸು ಮಾಡುತ್ತಿರುತ್ತದೆ.

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate - Dhyana Yoga | |
| - Descent of Soul - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| – ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ | |
| – ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

## ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯುವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

# ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)**

ಒಂದು ದಿನ ಬೆಳಗಿನ ಜಾವ ಬೆಳಕನ್ನು ಪ್ರಾರ್ಥಿಸುತ್ತಿದ್ದೆ. ತಕ್ಷಣ ನಾನು ಅರಿವಿನ ಮತ್ತೊಂದು ಹಂತಕ್ಕೆ ಹೋದೆ. ನಾನು ಅನಂತಶಯನ ದೇವಸ್ಥಾನದ ಒಳಗಿದ್ದೆ. ದೇವರ ಮುಖ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಕಣ್ಣು ರೆಪ್ಪೆಗಳು ಕೂಡ ಚಲಿಸುತ್ತಿದ್ದವು ಮತ್ತು ಆ ಭಗವಂತ ನನ್ನೊಡನೆ ಮಾತಾಡುತ್ತಿದ್ದ. "ಗುರೂಜಿಯವರು ನನ್ನನ್ನು ಕರೆಯುತ್ತಿದ್ದಾರೆ" ಎಂಬ ಧ್ವನಿ ಕೇಳಿಸಿತು. ಮರುಕ್ಷಣದಲ್ಲಿ, ನಾನು ಗುರೂಜಿಯವರು ಕುಳಿತಿದ್ದ ಕೊಠಡಿಯನ್ನು ಪ್ರವೇಶಿಸಿ ಅವರ ಮುಂದೆ ಕುಳಿತಿದ್ದೆ. ಗುರೂಜಿಯವರು, "ನಾನು ಕರೆದಾಗಲೆಲ್ಲ ನೀನು ಬಂದಿರುವೆ. ಈಗ ನಾನು ನಿನ್ನನ್ನು ಕರೆಯುತ್ತಿದ್ದೇನೆ", ಎಂದರು. ತಕ್ಷಣ ಅವರು ಒಂದು ಉಜ್ವಲ ಬೆಳಕಾಗಿ ಪರಿವರ್ತನೆಗೊಂಡು ನಂತರ ಮೊದಲ ರೂಪವನ್ನೇ ಪಡೆದರು. ಇದು ಕನಸೋ ನಿಜವೋ ಎಂದು ಧೃಡಪಡಿಸಿಕೊಳ್ಳಲು ವಿಶ್ವಾಮಿತ್ರ ಮಹರ್ಷಿಗಳನ್ನು ಪ್ರಾರ್ಥಿಸಿದಾಗ "ಕೃಷ್ಣಾನಂದರಿಗೆ ನೀನು ಅಲ್ಲಿ ಬೇಕಾಗಿದೆ" ಎಂದು ತಕ್ಷಣ ಉತ್ತರ ಸಿಕ್ಕಿತು.

– ನಾಗಶ್ರೀ

ನಾನು ಸೆಪ್ಟೆಂಬರ್ 8ರಂದು ಧ್ಯಾನ ಮಾಡುತ್ತಿದ್ದಾಗ ಭೂಮಿ ಸೂರ್ಯನ ಸುತ್ತ ಸುತ್ತುತ್ತಿದ್ದುದನ್ನು ಕಂಡೆ. ತಕ್ಷಣ ಅದು ತನ್ನ ಕಕ್ಷೆಯನ್ನು ಬದಲಿಸಿ ಸೂರ್ಯನ ಸಮೀಪ ಬಂದಿತು. ಇದರಿಂದ ಕೆಲವೆಡೆ ನೆರೆ ಮತ್ತು ಇನ್ನು ಕೆಲವೆಡೆ ಭೂಕುಸಿತ ಉಂಟಾಯಿತು. ಜನರು ಸೂರ್ಯನ ಅತಿಯಾದ ಶಾಖವನ್ನು ತಡೆದುಕೊಳ್ಳಲಾಗದೆ ತತ್ತರಿಸುತ್ತಿದ್ದರು.

– ಉಷಾ. ಸಿ

ಕೆಲವು ದಿನಗಳ ಹಿಂದೆ ನಾನು ರಾ–ಮಂದಿರವನ್ನು ಸಂಪರ್ಕಿಸಿದೆ. ಅದರ ಕೆಳಗೆ ಇರುವ ನೀರಿನ ತೊರೆಯ ಕಡೆಗೆ ಅಶರೀರಿಯಾಗಿ ಪ್ರಯಾಣಿಸಿದೆ. ಅಲ್ಲಿದ್ದ ಒಂದು ಗುಹೆಯ ಬಾಗಿಲಿಗೆ ಹೋಗಿ ಒಳಗೆ ಪ್ರವೇಶಿಸಲು ಅಪ್ಪಣೆ ಕೇಳಿದಾಗ ಅದು, ನೀನು ಇಲ್ಲಿ ಧ್ಯಾನ ಮಾಡಲಾಗುವುದಿಲ್ಲ, ಆದರೆ 7 ನಿಮಿಷಗಳವರೆಗೆ ಕುಳಿತು ಇಲ್ಲಿ ಸಂಗ್ರಹಿಸಿರುವ ರಾ–ಚೈತನ್ಯಗಳನ್ನು ಪಡೆಯಬಹುದು. ಇನ್ನು ಮುಂದೆ ಎಲ್ಲ ಧ್ಯಾನಿಗಳಿಗೂ ಆ ಚೈತನ್ಯಗಳು ಲಭ್ಯ ಇದೆ ಎಂದು ತಿಳಿಸಿತು ಮತ್ತು ಅಲ್ಲಿದ್ದ ಇನ್ನಿತರ ಗುಹೆಗಳಿಗೆ ಹೋಗಬಾರದೆಂದು ಎಚ್ಚರಿಸಿತು. ನಾನು ಆ ಗುಹೆಗಳ ಬಗ್ಗೆ ಕೇಳಿದಾಗ ಅಲ್ಲಿ ವಿಶೇಷ ಚೈತನ್ಯಗಳನ್ನು ಹೊಂದಿರುವ 7 ಗುಹೆಗಳಿವೆ. ಆ ಚೈತನ್ಯವನ್ನು ಸಕಾಲದಲ್ಲಿ ಹೊಸದಾಗಿ ಸೃಷ್ಟಿಸಿರುವ 7 ಭೂಮಿಗಳಿಗೆ ವರ್ಗಾಯಿಸಲಾಗುವುದು ಎಂದು ತಿಳಿಸಿತು. ನಂತರ ನಾನು ಗುಹೆಯೊಳಗೆ ಹೋಗಿ 7 ನಿಮಿಷಗಳವರೆಗೆ ಚೈತನ್ಯವನ್ನು ಪಡೆದು ಹಿಂತಿರುಗಿದೆ.

– ನಾಗಮಣಿ ಚಂದ್ರಶೇಖರ್

ಸೆಪ್ಟೆಂಬರ್ 14ರಂದು ನನ್ನ ಮಗನಿಗೆ ತುಂಬಾ ಜ್ವರವಿತ್ತು. ವೈದ್ಯರ ಸಲಹೆಯಂತೆ ಅವನಿಗೆ ಔಷಧ ಕೊಟ್ಟರೂ ಜ್ವರ ಕಡಿಮೆಯಾಗಲಿಲ್ಲ. ನನಗೆ ಧ್ಯಾನ ಮಾಡಲಾಗದ ಕಾರಣ ನೀಲಿ ಬೆಳಕನ್ನು ಚಾನಲ್ ಮಾಡಲು ಶುರುಮಾಡಿದೆ. ಆ ಬೆಳಕನ್ನು ಮನೆಗೆಲ್ಲ ಹರಡಿ ನನ್ನ ಮಗನಿಗೂ ಸತತವಾಗಿ ಕಳುಹಿಸಿದೆ. ಅದಾದ 15 ನಿಮಿಷಗಳಲ್ಲಿ ನನ್ನ ಮಗನ ಜ್ವರ ಸಂಪೂರ್ಣ ವಾಸಿಯಾಗಿ ನಿದ್ದೆ ಮಾಡಿದ.

ಸೆಪ್ಟೆಂಬರ್ 25ರಂದು ಬೆಳಕನ್ನು ಚಾನಲ್ ಮಾಡುತ್ತಿದ್ದಾಗ ನಾನು ಭೂಮಿಯಷ್ಟು ದೊಡ್ಡದಾಗಿ ಬೆಳೆದಂತೆ ಭಾಸವಾಯಿತು ಹಾಗೂ ನಾನು ಒಬ್ಬ ವ್ಯಕ್ತಿ ಎಂಬ ಅರಿವೂ ಇತ್ತು. ಕೆಲವು ನಿಮಿಷಗಳವರೆಗೆ ಶಾಂತಿ ಹಾಗೂ ಪ್ರಶಾಂತತೆಯನ್ನು ಅನುಭವಿಸಿದರೂ ಅದರ ಪ್ರಭಾವ ಬಹಳ ಕಾಲವಿತ್ತು. ಆ ಸಮಯದಲ್ಲಿ ನನ್ನ ಮನದಲ್ಲಿ ಕೆಲವು ಪ್ರಶ್ನೆಗಳು ಉದ್ಭವಿಸಿದವು. ಅವೆಲ್ಲಕ್ಕೂ ಉತ್ತರಗಳು ಸಿಕ್ಕಿದವು. ನಂತರ ಗುರೂಜಿಯವರು ನನಗೆ ಸಿಕ್ಕಿದ್ದ ಉತ್ತರಗಳೆಲ್ಲ ಸರಿಯಾದ ಉತ್ತರಗಳೆಂದು ತಿಳಿಸಿದರು.

– ಕಿರಣ್ಮಯಿ

ಶ್ರೀ ಕೃಷ್ಣ ಜನ್ಮಾಷ್ಟಮಿಯ ವಿಶೇಷ ಧ್ಯಾನದಂದು ನಾವು ಏಕೆ ಒಂದು ಬೆಳಕಿನ ಚುಕ್ಕಿಯಾಗಬೇಕೆಂದು ಆಶ್ಚರ್ಯವಾಯಿತು. ಆಗ ಭಗವಾನ್ ಕೃಷ್ಣನ ಧ್ವನಿ ಕೇಳಿಸಿತು: "ಜೀವಾತ್ಮ, ಪರಮಾತ್ಮನೊಡನೆ ಐಕ್ಯವಾಗುವುದಕ್ಕೆ ಮತ್ತು ನನ್ನ ಪರಿಪೂರ್ಣತೆಯನ್ನು ಅನುಭವಿಸುವುದಕ್ಕೆ. ಅದನ್ನು ಪೂರ್ಣ ಸಮರ್ಪಣಾಭಾವದಿಂದ ಮಾಡು. ಕಳೆದ ಬಾರಿ ನಾನು ನಿನಗೆ ಭೌತ ದೇಹದ ಮಿತಿಗಳಿಂದಾಚೆ ಹೋಗಿ ಏಕತೆಯನ್ನು ಅನುಭವಿಸುವಂತೆ ತಿಳಿಸಿದ್ದೆ. ಇದನ್ನು ನೀನು ಅಭ್ಯಾಸ ಮಾಡಬೇಕು. ಬೆಳಕನ್ನು ನಿನ್ನಲ್ಲಿ ತುಂಬಿಕೊಂಡು ಅದನ್ನು ವಿಸ್ತರಿಸು. ಬೆಳಕು ಎಲ್ಲೆಡೆ ಆವರಿಸಿದಂತೆ ನೀನು ಕೂಡಾ ಎಲ್ಲವನ್ನು ಆವರಿಸುವೆ. ಆಗ ಏಕತೆಯನ್ನು ಅನುಭವಿಸುವೆ."

–ವಿದ್ಯಾ ಅರೋರಾ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ